ಸ್ವರೂಪವನ್ನು ತಕ್ಕಮಟ್ಟಿಗಾದರೂ ಉಳಿಸಿಕೊಂಡಿದೆ ಎಂಬುದು ಇದ್ದದ್ದರಲ್ಲಿ ಸಮಾಧಾನದ ಸಂಗತಿ. ಹಾಗಾಗಿ, ಇಂದಿನ ವಿಕೃತ ವಾಸ್ತವತೆಯ ಮೂಲಕ ನಾವು ಹಿಂದಿನ ಪ್ರಾಕೃತಿಕ ವೈಭವದತ್ತ ಹೆಜ್ಜೆ ಹಾಕಬೇಕಾದುದು ಅನಿವಾರ್ಯವೇ ಆಗಿದೆ. ಯಾಕೆಂದರೆ, ಇತಿಹಾಸದ ಎಚ್ಚರದೊಂದಿಗೆ ವಾಸ್ತವದ ನೆಲೆಗಟ್ಟನ್ನು ಅರ್ಥಮಾಡಿಕೊಂಡು ಮನುಷ್ಯ ಭವಿಷ್ಯದತ್ತ ಹೆಜ್ಜೆ ಇಡಬೇಕಾದುದು ಸರಿಯಾದ ಕ್ರಮ ಮತ್ತು ಅದೇ ಬದುಕಿನ ರಹಸ್ಯವೂ ಆಗಿದೆ. ಈ ಜೀವನ ದೃಷ್ಟಿ ನನಗೆ ತಕ್ಕಮಟ್ಟಿಗಾದರೂ ಇದೆ ಎಂದು ನಾನು ನಂಬಿದ್ದೇನೆ. ಸುಮಾರು ಅರವತ್ತು ವರ್ಷಕ್ಕೂ ಮೇಲ್ಪಟ್ಟು ಆ ಕೆರೆಯೊಂದಿಗೆ ತಾದಾತ್ಮ್ಯಭಾವದಿಂದ ಬೆರೆತುಹೋಗಿರುವ ನಾನು ಮೊದಲನೆಯ ಸಲ ಅದನ್ನು ನೋಡಿದ್ದು ನನ್ನ ಐದು ಅಥವಾ ಆರನೆಯ ವಯಸ್ಸಿನಲ್ಲಿ ಎಂದು ನೆನಪು. ಆ ದಿನಗಳಲ್ಲೊಮ್ಮೆ ಎನ್.ಐ.ಇ. ಕಾಲೇಜಿನ ಬಳಿಯ ನೆಂಟರೊಬ್ಬರ ಮನೆಯಲ್ಲಿದ್ದ ನನ್ನನ್ನು ನಮ್ಮ ತಂದೆ 18 ಕಿಲೊಮೀಟರ್ ಅಂತರದಲ್ಲಿರುವ ಊರು ಹುಯಿಲಾಳಿಗೆ ಬೈಸಿಕಲ್ಲಿನಲ್ಲಿ ಡಬ್ಬಲ್ ರೈಡಿಂಗ್ ಮಾಡಿಕೊಡು ಕರೆದುಕೊಂಡು ಹೋದರು. ಮೈಸೂರಿನಿಂದ ಹುಣಸೂರಿಗೆ ಹೋಗುವ ದಾರಿಯಲ್ಲಿ ಸಿಗುವ ಕೆರೆಯ ಬಳಿ ಸ್ವಲ್ಪ ಹೊತ್ತು ಬೈಸಿಕಲ್ಲನ್ನು ನಿಲ್ಲಿಸಿ, ಅಲ್ಲಿ ಇಬ್ಬರೂ ಮುಖ ಕೈಕಾಲು ತೊಳೆದುಕೊಂಡೆವು. ನಾನಂತೂ ತಿಳಿಯಾಗಿದ್ದ ಕೆರೆ ನೀರನ್ನು ಒಂದೆರಡು ಬೊಗಸೆಯಷ್ಟು ಕುಡಿದು ತೃಪ್ತಿಪಟ್ಟೆ. ನಮ್ಮ ತಂದೆ ಅದರ ಹೆಸರು ಕುಕ್ಕರಹಳ್ಳಿ ಕೆರೆ ಎಂದು ಹೇಳಿದರು. ಮೊದಲನೆಯ ಬಾರಿ ಆ ಕೆರೆಯ ಹೆಸರನ್ನು ಕೇಳಿದೆ. ಅಂದಿನಿಂದ ಇಲ್ಲಿಯ ತನಕ ಅದು ನನ್ನ ನೆನಪಿನಲ್ಲಿ ಉಳಿದು, ಅನಂತ ಅನುಭವಗಳ ಮೂಲಕ ನನ್ನನ್ನು ರೂಪಿಸಿದ ಒಂದು ಪರಮ ಗಮ್ಯಸ್ಥಾನವಾಗಿ ನೆಲೆಸಿದೆ. ವಾಸ್ತವವಾಗಿ ಅದು ಕುಕ್ಕನಹಳ್ಳಿಯ ಕೆರೆ. ಅಂದರೆ, ಕುಕ್ಕ ಎಂಬುವವನ ಹೆಸರಿನಲ್ಲಿ ನಿರ್ಮಿತವಾಗಿರುವ ಊರಿಗೆ ಸೇರಿಕೊಂಡಂತಿರುವ ಕೆರೆ ಎಂದು ಅರ್ಥವಾಗುತ್ತದೆ. ಆದರೆ, ಆ ಕುಕ್ಕ ಯಾರು? ಆ ಬಗ್ಗೆ ಸ್ಪಷ್ಟವಾದ ಯಾವ ದಾಖಲಾತಿಯೂ ಲಭ್ಯವಾಗುವುದಿಲ್ಲ. ಕುಕ್ಕನಹಳ್ಳಿ ಎಂಬುದು 'ನ'ಕಾರದ ಏಕವಚನವನ್ನು ಕಳೆದುಕೊಂಡು 'ರ'ಕಾರದ ಬಹುವಚನವಾಗಿ ಬದಲಾವಣೆ ಹೊಂದಿ 'ಕುಕ್ಕರಹಳ್ಳಿ' ಎಂದಾಗಿದೆ. ಕೆರೆಗೆ ಸೇರಿದಂತಿರುವ ಊರು ಕುಕ್ಕರಹಳ್ಳಿ. ಇತಿಹಾಸದ ದಾಖಲಾತಿಯ ಪ್ರಕಾರ 1881ರಲ್ಲಿ ಅದೀಗ ತಾನೆ ಬೆಳೆಯುತ್ತಿದ್ದ ಮೈಸೂರಿಗೆ ಕುಡಿಯುವ ನೀರು ಸರಬರಾಜಿಗಾಗಿ ಒಂದು ಕೆರೆಯನ್ನು ನಿರ್ಮಿಸಲಾಯಿತು. ಅದೇ ಇಂದಿನ ಕುಕ್ಕರಹಳ್ಳಿ ಕೆರೆ. ಅದಕ್ಕೂ ಮುಂಚೆ ಅಲ್ಲೊಂದು ಸಣ್ಣ ತೊರೆ ಹರಿಯುತ್ತಿತ್ತು.

ಈ ಕೆರೆಗೂ ಮತ್ತು ನನಗೂ ಆತ್ಮೀಯವಾದ ಒಡನಾಟ ಬಹಳ ವರ್ಷಗಳಿಂದ ಇದೆ. ಕೆರೆ ನೀರಿನಲ್ಲಿ ಅನೇಕಾನೇಕ ಬಾರಿ ಕೈಕಾಲುಮುಖ ತೊಳೆದು ತಣಿದುಕೊಂಡಿದ್ದೇನೆ, ಸ್ನಾನ ಮಾಡಿ ಶುದ್ಧಿಯಾಗಿದ್ದೇನೆ, ಕೊಳೆಬಟ್ಟೆ ಒಗೆದು ಮಡಿಬಟ್ಟೆ ಉಟ್ಟಿದ್ದೇನೆ, ಬಾಯಾರಿದಾಗ ಮನ ತಣಿಯುವಷ್ಟು ನೀರು ಕುಡಿದು ದಣಿವಾರಿಸಿಕೊಂಡಿದ್ದೇನೆ, ಕೆರೆಯ ದಡದ ಮೇಲೆ ಸಹಸ್ರಾರು ಬಾರಿ ಓಡಾಡಿ ಘಾಸಿಗೊಂಡ ಮನಸ್ಸಿಗೆ ತಂಪು ಎರೆದಿದ್ದೇನೆ, ಅದರ ಹಸಿರು ಕಾಡಿನ ಒಳಹೊಕ್ಕು ನೇರಳೆಹಣ್ಣು ಆರಿಸಿ ತಿಂದಿದ್ದೇನೆ, ಮೈಸೂರಿನಲ್ಲಿ ನೆಲೆಯೇ ಇಲ್ಲದಿದ್ದಾಗ ರಾತ್ರಿಗಳನ್ನು ಕಳೆದಿದ್ದೇನೆ, ಕೆಲವೊಮ್ಮೆ ಸಂಜೆಯ ಹೊತ್ತು ಕವಿ ಕುವೆಂಪು, ವಿ.ಎನ್. ಮೂರ್ತಿರಾವ್, ಗೋಪಾಲಕೃಷ್ಣ ಅಡಿಗರು ಕೆರೆ ದಂಡೆಯ ಮೇಲೆ ತಿರುಗಾಟ ಮಾಡುತ್ತಿದ್ದುದನ್ನು ಬೆರಗುಗಣ್ಣುಗಳಿಂದ ನೋಡಿದ್ದೇನೆ, ಟಿ.ಎಸ್. ವೆಂಕಣ್ಣಯ್ಯ, ಪಿ. ಸೀತಾರಾಮಯ್ಯ, ಚಿತ್ರ ಕಲಾವಿದ ಕೆ. ವೆಂಕಟಪ್ಪ ಈ ಮುಂತಾದವರು ಇದೇ ಕೆರೆ ದಂಡೆ ಮೇಲೆ ತಿರುಗಾಟ ಮಾಡುತ್ತಿದ್ದರೆಂದು ಕೇಳಿದ್ದೇನೆ. ಇಂಗ್ಲಿಷ್ ಸಣ್ಣಕಥೆಗಾರ ಆರ್.ಕೆ. ನಾರಾಯಣ್ ಅವರು ಕೆರೆಯ ಪೂರ್ವದ ಪ್ರವೇಶ ದ್ವಾರದ ಬಳಿಯಿರುವ, ಆಗಿನ್ನೂ ಸಸಿಯಾಗಿದ್ದ ಆಲದಮರದ ಬುಡದಲ್ಲಿ ಕುಳಿತು ಕಥೆ ಬರೆಯುತ್ತಿದ್ದುದನ್ನು ನೋಡಿದ್ದೇನೆ, ಕನ್ನಡ ಸಂಶೋಧನಾ ಕ್ಷೇತ್ರದ ಅಧ್ವರ್ಯುಗಳಲ್ಲಿ ಒಬ್ಬರಾಗಿದ್ದ ಅವಧೂತ ವ್ಯಕ್ತಿತ್ವದ ಎಲ್. ಬಸವರಾಜು ಅವರು ಬೇಸಿಗೆ ಕಾಲದ ಮಟಮಟ ಮಧ್ಯಾಹ್ನದ ಎರಡು